7.	ಹರಿಹರಪುರ – 2	3–00	27–7–2004	33,000
8.	ಅದ್ದಡ	2–00	27–7–2004	12,000
9.	ಬೊಮ್ಮಲಾಪುರ	2–00	27–7–2004	ಬಿಡ್‌ದಾರರು ಭಾಗವಹಿಸಲಿಲ್ಲ
2)	ಶೃಂಗೇರಿ ತಾಲ್ಲೂಕು	9. ಸ್ಥಳಗಳನ್ನು ಗುರುತಿಸಿದೆ.		
1.	ಶೃಂಗೇರಿ	3–00	16–12–2003	16,000
2.	ಮಸಿಗೆ	2–00	16–12–2003	10,100
3.	ಹಾಲಂದೂರು	1–00	16–12–2003	6,500
4.	ಅಡಡ್ಡಗದ್ದೆ – 1	1–00	16–12–2003	ಬಿಡ್ಡುದಾರರ್ಯಾರೂ
5.	ಅಡಡ್ಡಗದ್ದೆ – 2	2–00	16–12–2003	ಹರಾಜಿಗೆ
6.	ಅಡಡ್ಡಗದ್ದೆ – 3	2–00	16–12–2003	ಭಾಗವಹಿಸಿರು–ವುದಿಲ್ಲ
7.	ಕಾವಡಿ	2–00	16–12–2003	ಗ್ರಾಮ ಪಂಚಾಯಿತಿ
8.	ಹಾಲಂದೂರು – 2	2–00	16–12–2003 ಪಹಣಿ	ಸದಸ್ಯರಿಂದ
9.	ಹಾಲಂದೂರು – 3	1–00	16–12–2003	ಬಾರದ ಕಾರಣ ಹರಾಜು ನಡೆದಿಲ್ಲ.

...

328 (773) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯ ಒತ್ತುವರಿ ಮಾಡಿರುವ ರೈತರ ಹಿತರಕ್ಷಣೆ ಕಾಪಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಈ ವಿಷಯದ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಅಥವಾ ಪುನಃ ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆಯೇ; ಸಲ್ಲಿಸಲಾಗದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಈ ವಿಷಯದ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ರೈತರ ಹಿತ ಕಾಪಾಡುವ ಕ್ರಮ ಕೈಗೊಳ್ಳುವ ಬಗ್ಗೆ ಮನವಿ ಮಾಡಿದೆಯೇ;

ಈ) ಮಾಡಿದ್ದಲ್ಲಿ, ಯಾವಾಗ ಮಾಡಲಾಗಿರುವುದು; ಹಾಗೂ ಅದಕ್ಕೆ ಕೇಂದ್ರ ಸರ್ಕಾರದಿಂದ ಬಂದ ಉತ್ತರವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು)

ಅ) ದಿನಾಂಕ: 27–4–1978 ಪೂರ್ವದಲ್ಲಿನ ಒಟ್ಟು 14848 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19348 ಕುಟುಂಬಗಳು ಮಾಡಿದ ಅನಧಿಕೃತ ಒತ್ತುವರಿಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಪಟ್ಟಾ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಕೈ ಬಿಟ್ಟು ಹೋದ ಹಾಗೂ ದಿನಾಂಕ: 27–4–1978 ರಿಂದ 25–10–1980ರ ಅವಧಿಯಲ್ಲಿ ಆದ ಒತ್ತುವರಿ ಪ್ರಕರಣಗಳನ್ನು ಪರಿಶೀಲಿಸಲು ರಾಜ್ಯ ಸರ್ಕಾರವು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿರುತ್ತದೆ.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ 1980ರ ನಂತರ ಒತ್ತುವರಿಗಳಾಗಿರುವ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ. 1980ರ ನಂತರ ಅರಣ್ಯ ಒತ್ತುವರಿಯಾಗಿರುವ ಹಾಗೂ ಈ ಒತ್ತುವರಿಯು ಕೃಷಿ ಮತ್ತು ವಾಸಕ್ಕಾಗಿ (ಜೀವನಾಧಾರಕ್ಕಾಗಿ) ಉಪಯೋಗಿಸುತ್ತಿರುವುದರಿಂದ ಈ ಒತ್ತುವರಿಗಳನ್ನು ಸಕ್ರಮಗೊಳಿಸಲು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಮಾರ್ಗಸೂಚಿಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡಲು ಕೇಂದ್ರ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸನ್ನು ಮಾಡುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಐ.ಎ. ಸಲ್ಲಿಸಿದೆ. ಕೇಂದ್ರ ಸರ್ಕಾರವನ್ನು ಸಹ 1980ರ ನಂತರ ಅರಣ್ಯ ಒತ್ತುವರಿಯಾಗಿರುವ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಮಾರ್ಗಸೂಚಿಯನ್ನು ಸಡಿಲಿಸಲು ಕೋರಲಾಗಿತ್ತು. ಕೇಂದ್ರ ಸರ್ಕಾರವು ಈ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದು ಇದನ್ನು ಪುನರ್‌ಪರಿಶೀಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

.....

329 (705) Sri Kalakappa Gurushantappa Bhandi (Ron) ..... Chief Minister will be pleased to state?

a) When was the Government order issued for Establishment of a court of Civil Judge (Sr. Dn) at Ron in Gadag District;

b) What are the reasons for not functioning of the Court, till now?;

c) Whether Government is aware of the fact that the litigant public are facing much difficulty, as the court has not yet started functioning;

d) If so, what are the steps taken by the Government for starting of the Court as early as possible and when the court will start functioning;

e) The number of staff sanctioned to this court and which are they?

Sri Dharm Singh (Chief Minister)

a) In G.O. No. LAW 98 LCE 2003, dated 21.10.2003 Government has ordered for establishment of Civil Judge Court (Sr. Dn) at Ron in Gadag Dist.